## ರಘುನಾಥಪುರದ ಶಂಕರವನದಲ್ಲಿ ಹಿರಿಯ ನೀರಗಂಟಿಗಳ ಸಭೆ

# ನೀಲಗಿರಿ ಬೆಳೆಯಿಂದ ಅಂತರ್ಜಲಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

**ದೊಡ್ಡಬಳ್ಳಾಪುರ:** ಕೊಳವೆ ಬಾವಿ ಕೊರೆಯಲು ಆರಂಭಿಸಿದ ನಂತರ ಮತ್ತು ನೀಲಗಿರಿ ಬೆಳೆಯಲು ಆರಂಭಿಸಿದ ನಂತರವೇ ಕೆರೆ ತುಂಬುವುದು ಕಡಿಮೆಯಾಗಿ ನಮ್ಮ ಭಾಗದಲ್ಲಿ ನೀರು ಬತ್ತಿ ಹೋಗಿದೆ ಎಂದು ತಾಲ್ಲೂಕಿನ ವಿವಿಧ ಗ್ರಾಮಗಳ ನೀರಗಂಟಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಅಶೋಕ ಪರಿಸರ ಮತ್ತು ಪರಿಸರ ವಿಜ್ಞಾನ ಸಂಶೋಧನ ಸಂಸ್ಥೆ ವತಿಯಿಂದ ನಡೆದ ನಂದಿ ಬೆಟ್ಟದ ತಪ್ಪಲಿನಿಂದ ಹೆಸರಘಟ್ಟ ನಡುವಿನ ಕೆರೆಗಳ ಖಾನೆಗಳಲ್ಲಿ ನೀರು ಕಟ್ಟುವ ಕಾಯಕ ಮಾಡುತ್ತಿದ್ದ ಹಿರಿಯ ನೀರಗಂಟಿಗಳ ಸಭೆ ರಘುನಾಥಪುರದ ಶಂಕರವನದಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಲಿಂಗನಹಳ್ಳಿ ಕೆರೆ ಅಚ್ಚುಕಟ್ಟು ಪ್ರದೇಶದ ನೀರಗಂಟಿ ಮುನಿ ಆಂಜಿನಪ್ಪ,ಚಿಕ್ಕತುಮಕೂರು ಕೆರೆ ಅಚ್ಚುಕಟ್ಟು ಪ್ರದೇಶದ ವೆಂಕಟನರಸಪ್ಪ, ತಾಲ್ಲೂಕಿನ ಎಲ್ಲ ಕೆರೆಗಳ ಖಾನೆಯಲ್ಲಿ ಮುಂಗಾರು ಬೆಳೆ ಹಾಗೂ ನಂತರದ ಹಿಂಗಾರು- ನೀರಾವರಿ ಬೆಳೆ ಸೇರಿ ಎರಡು ಬೆಳೆ ತೆಗೆಯಲಾಗುತ್ತಿತ್ತು. ಕೆಲವೇ ವರ್ಷಗಳಲ್ಲಿ ಅಂತರ್ಜಲ ಮತ್ತು ಕೆರೆ ನೀರೂ ಕಡಿಮೆಯಾಗಿ ಬೆಳೆಗಳು ಕಡಿಮೆಯಾಗಿದೆ. ಮಳೆಗಾಲದ ಬೆಳೆಗೂ ತೇವಾಂಶ ಸಾಲುತ್ತಿಲ್ಲ ಎಂದರು.

ಮದುರೆ ಕೆರೆಯಲ್ಲಿ ಮೂರು ಬೆಳೆಗಳನ್ನು ತೆಗೆಯಲಾಗುತ್ತಿತ್ತು. ಎರಡು ಬೆಳೆಗಳನ್ನು ತೆಗೆಯುವಲ್ಲೂ ಉಳಿದ ತೇವಾಂಶದಲ್ಲಿ ಕೆಲವು ಕಾಳುಗಳನ್ನು, ಕೊತ್ತಂಬರಿ ಮುಂತಾದ ಬೆಳೆ ಬೆಳೆಯುತ್ತಿದ್ದರು. ಕೊಳವೆ ಬಾವಿಗಳನ್ನು ಕೊರೆಯಲು ಆರಂಭಿಸಿದ ಮೇಲೆ ದಿನ್ನೆ ಭಾಗದಲ್ಲೂ ಬೇಸಿಗೆಯ ಬೆಳೆಗಳನ್ನು ಬೆಳೆಯಲಾರಂಭಿಸಲಾಯಿತು ಎಂದರು.

ಅರ್ಕಾವತಿ ಪುನಶ್ಚೇತನ ಆಂದೋಲನದ ಕಾರ್ಯಕರ್ತರ ಸಂಶೋಧನಾ ತಂಡದ ಜನಾರ್ದನ ಕೆಸರಗದ್ದೆ ಮಾತನಾಡಿ, ನೀರಗಂಟಿಗಳು ಮಳೆ ಬರುವುದಕ್ಕೆ ಮೊದಲೇ ತೂಬು ಮುಚ್ಚಿ ಕೆರೆಯಲ್ಲಿ ನೀರು ಶೇಖರಣೆಯಾಗುವಂತೆ ವ್ಯವಸ್ಥೆ ಮಾಡುತ್ತಿದ್ದರು. ಇದರಿಂದ ಕೆರೆಯಲ್ಲಿ ಸಮೃದ್ಧ ನೀರು, ಮೀನು, ಏಡಿ ಸೇರಿದಂತೆ ಇತರೆ ಜಲಚರಗಳು ಜೀವಿಸಲು ಅನುಕೂಲವಾಗುತ್ತಿತ್ತು ಎಂದರು.

ಕಳೆದ ಇಪ್ಪತ್ತು ವರ್ಷಗಳ ಹಿಂದಿದ್ದ ಸಮೃದ್ಧತೆ ಮರೆಯಾಗಿದೆ. ನೀರಿನ ನಿರ್ವಹಣೆ ಮಾಡುತ್ತಿದ್ದ ನೀರಗಂಟಿಗಳ ಬದುಕು ಕಳೆಗುಂದಿದೆ, ಕೆರೆಯ ತೂಬು ಮುಚ್ಚಿದ ಮೇಲೆ ಮತ್ತು ಖಾನೆಗಳಲ್ಲಿ ಕೃಷಿ- ನೀರಾವರಿ ನಿಂತ ಮೇಲೆ ಯಾವುದೇ ಆದಾಯಗಳಿಲ್ಲ. ನೀರಗಂಟಿಗಳು ಮಾಡಿದ ಸೇವೆಯನ್ನು ಸರ್ಕಾರವು ಪರಿಗಣಿಸಲಿಲ್ಲ ಎಂದರು.

ಕೆಲವು ಊರುಗಳಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ವರ್ಷ ಸರದಿ ಪ್ರಕಾರ ಕೆಲಸ ಮಾಡುತ್ತಿದ್ದರಿಂದ ಮತ್ತು ಅವರು ಅಣ್ಣ ತಮ್ಮಂದಿರೇ ಆಗಿರುತ್ತಿದ್ದುದರಿಂದ ಊರಿನಲ್ಲಿ ಒಬ್ಬರಿಗೆ ಮಾತ್ರ ಸರ್ಕಾರದಿಂದ ಸಿಗುತ್ತಿದ್ದ ಗೌರವಧನ ಪಡೆಯಲು ಸಾಧ್ಯವಾಗಿಲ್ಲ. ಈ ಸಮಸ್ಯೆಸೂಕ್ತ ರೀತಿಯಲ್ಲಿ ಪರಿಹರಿಸಬೇಕು ಎಂದರು.

ಸಭೆಯಲ್ಲಿ ದೊಡ್ಡರಾಯಪ್ಪನಹಳ್ಳಿ, ಮೇಳೇಕೋಟೆ, ಕಂಚಿಗನಾಳ, ತಿರುಮಗೊಂಡನಹಳ್ಳಿ, ಗಂಗಸಂದ್ರ, ತಿಮ್ಮಸಂದ್ರ, ರಾಜಘಟ್ಟ, ಗೂಳ್ಯ, ಲಿಂಗನಹಳ್ಳಿ, ಕೊನ್ನಘಟ್ಟ, ಖಾಸ್‌ಭಾಗ್, ಚಿಕ್ಕತುಮಕೂರು, ದೊಡ್ಡತುಮಕೂರು, ಬುಡುಮನಹಳ್ಳಿ, ಬ್ಯಾತ, ಮದುರೆಯ ಹಿರಿಯ ನೀರಗಂಟಿಗಳು,ಸಂಶೋಧನಾ ತಂಡದ ಮುಖ್ಯಸ್ಥ ಡಾ.ಶರದಲೇಲೆ, ಡಾ.ವೀಣಾ ಶ್ರೀನಿವಾಸನ್, ಬಿಜೋಯ್ ಥೋಮಸ್, ವಿಕ್ರಂ, ಅರ್ಕಾವತಿ ಪುನಶ್ಚೇತನ ಆಂದೋಲನದ ಕಾರ್ಯಕರ್ತರ ಸಂಶೋಧನಾ ತಂಡದ ಜಿ.ಮಂಜುನಾಥ, ಚಿದಾನಂದಮೂರ್ತಿ, ಬ್ಯಾತ ಮುನಿರಾಜಪ್ಪ, ಶಂಕರವನದ ಸುಭದ್ರಮ್ಮ ಮುಂತಾದವರು ಉಪಸ್ಥಿತರಿದ್ದರು.

### ಮುಖ್ಯಾಂಶಗಳು

- ನೀರಗಂಟಿಗಳ ಬದುಕು ಅತಂತ್ರ
- ಕೆರೆ ನಿರ್ವಹಣೆ ಜವಾಬ್ದಾರಿ ನೀರಗಂಟಿಗಳಿಗೆ ಇರಲಿ

**ನೀರಗಂಟಿಗಳ ಬದುಕು ಕಳೆಗುಂದಿದೆ. ಸಾಮೂಹಿಕ ಸಂಪತ್ತಾಗಿದ್ದ ಕೆರೆ ನೀರಿನ ನಿರ್ವಹಣೆಯ ಜ್ಞಾನ ಪರಂಪರೆ ಕೊಂಡಿ ಹಿರಿಯ ನೀರಗಂಟಿಗಳ ಸಾವಿನೊಂದಿಗೆ ಕಳಚುತ್ತಿದೆ**

***ಜನಾರ್ದನ ಕೆಸರಗದ್ದೆ***

ಸಂಚಾಲಕ



ದೊಡ್ಡಬಳ್ಳಾಪುರದ ರಘುನಾಥಪುರದ ಶಂಕರವನದಲ್ಲಿ ನಡೆದ ಹಿರಿಯ ನೀರುಗಂಟಿಗಳ ಸಭೆಯಲ್ಲಿ ಭಾಗವಹಿಸಿದ್ದ ನೀರಗಂಟಿಗಳು


– ಎಲೆಕ್ಟ್ರಿಕಲ್ ಶಾಖೆ

स्वच्छ भारत एक कदम स्वच्छता की ओर

ಖ್ಯೆ. ಬಿ/ಇ29/2015-16/ಒಟಿ/43

ರೈಲ್ವೆ, ಬೆಂಗಳೂರು-560023 ಇವರು ಭಾರತದ
ೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಅಂದಾಜು ಮೌಲ್ಯ (ರೂ.) | ಇಎಂಡಿ (ರೂ.ಗಳಲ್ಲಿ) | ಕೆಲಸ ಮುಗಿಸುವ ಕಾಲಾವಧಿ |
|---|---|---|
| 11,97,000/- | 23,940/- | 12 ತಿಂಗಳು |

್‌ಗೆ ಮಹೀಂದ್ರ ಚಾಂಪಿಯನ್ ಅಥವಾ ಟಾಟಾ
/ಪಿಕಪ್ ವ್ಯಾನ್ 12 ತಿಂಗಳುಗಳ ಅವಧಿಗೆ ಬಾಡಿಗೆಗೆ.

02-2016ರ 11-00 ಗಂಟೆಯವರೆಗೆ

್ ಮಾಡಿಕೊಳ್ಳುವುದು ಸೇರಿದಂತೆ ಸದರಿ ಟೆಂಡರ್‌ನ
indianrailways.gov.in ಗೆ ಲಾಗಿನ್

ಮಂಡಲ ರೈಲ್ವೆ ವ್ಯವಸ್ಥಾಪಕರು (ಎಲೆಕ್ಟ್ರಿಕಲ್)
ನೈರುತ್ಯ ರೈಲ್ವೆ , ಬೆಂಗಳೂರು-560023